(8ನೇ ಪುಟದಿಂದ)

ಅಂತಹ ಜೀವರಾಶಿಗಳಲ್ಲಿ ನಮ್ಮ ಮುದ್ದು ಗುಬ್ಬಚ್ಚಿಗಳೂ ಸೇರಿವೆ. ಗುಬ್ಬಚ್ಚಿಯಂತಹ ಪುಟ್ಟ ಮರಿಗಳು ಕಣ್ಮರೆಯಾಗಲು ಕೀಟನಾಶಕಗಳು, ತೀವ್ರ ತರಂಗಗಳು, ಸಹಜ ಪರಿಸರ ನಾಶ ಇವೆಲ್ಲ ಕಾರಣ ಎಂದು ಹೇಳಲಾಗುತ್ತಿದೆ. ಅವನತಿಯ ಹಾದಿಯಲ್ಲಿ ಹೊರಟಿರುವ ನೂರಾರು ಜೀವ ಜಾತಿಯನ್ನು ಉಳಿಸಲು ಹಲವಾರು ಸಮಾನಮನಸ್ಕ ಸಂಸ್ಥೆಗಳು ಉದ್ಯುಕ್ತವಾಗಿವೆ.

'ವರ್ಲ್ಡ್ ಸ್ಪಾರೋ ಡೇ' ಅಥವ 'ವಿಶ್ವ ಗುಬ್ಬಚ್ಚಿ ದಿನ' ಆರಂಭವಾದದ್ದು ಎರಡು ವರ್ಷದ ಹಿಂದೆ, 2010ರ ಮಾರ್ಚ್ 20ರಂದು. ಆರಂಭಿಸಿದ್ದು ನೇಚರ್ ಫಾರ್ ಎವರ್ ಎಂಬ ಸಂಸ್ಥೆ. ಗುಬ್ಬಿಯ ನೆವದಲ್ಲಿ ನಮ್ಮ ಸುತ್ತಲ ಜೀವ ವೈವಿಧ್ಯತೆ ಉಳಿಸಿಕೊಳ್ಳುವ ಎಚ್ಚರಿಕೆಯನ್ನು ಹುಟ್ಟಿಸುವುದು ನೇಚರ್ ಫಾರ್ ಎವರ್ ಸಂಸ್ಥೆಯ ಸದಾಶಯವಾಗಿದೆ. ಗುಬ್ಬಿ ದಿನಾಚರಣೆಯಲ್ಲಿ ಮನೆಗುಬ್ಬಿ ಮಾತ್ರವಲ್ಲದೆ ಗುಬ್ಬಿಯ ಎಲ್ಲ ವರ್ಗಗಳ ಗುಬ್ಬಿಗಳೂ ಸೇರುತ್ತವೆ. ಪ್ರಾಣಿ ಸಂಕುಲದಲ್ಲಿ ಹೂವು-ಗಳಂತೆ ನಳನಳಿಸುವ ಗುಬ್ಬಿಗಳನ್ನು ಸಂರಕ್ಷಿಸುವ ಮನೋಸ್ಥಿತಿಯನ್ನು ವಿಶ್ವದಾದ್ಯಂತ ಜಾಗೃತಗೊಳಿಸುವುದು ತನ್ನ ಉದ್ದೇಶವಾಗಿದೆ ಎಂದು ಸಂಸ್ಥೆಯು ಸ್ಪಷ್ಟಪಡಿಸುತ್ತದೆ.

ವರ್ಲ್ಡ್ ಸ್ಪಾರೋ ಡೇ ಚಿನ್ಹೆಯನ್ನು ಯಾರು ಬೇಕಾದರೂ ಫೇಸ್ ಬುಕ್ ಮತ್ತು ಬ್ಲಾಗ್‌ಗಳಲ್ಲಿ ಬಳಸಿಕೊಳ್ಳಬಹುದು, ಆ ಮೂಲಕ ಗುಬ್ಬಚ್ಚಿಯ ಬಗ್ಗೆ ಸಂವೇದನೆಯನ್ನು ಪಸರಿಸಬಹುದು ಎಂದು ನೇಚರ್ ಫಾರ್ ಎವರ್ ಸಂಸ್ಥೆ ಹೇಳುತ್ತದೆ.









## 'ಗುಬ್ಬಿ ಚಾಂಪಿಯನ್' ಮೊಹಮ್ಮದ್ ದಿಲಾವರ್

**ಯು**ಕೆ ಒಂದರಲ್ಲೇ ಶೇ 70ರಷ್ಟು ಪ್ರಮಾಣದಲ್ಲಿ ಗುಬ್ಬಿಗಳ ಸಂಖ್ಯೆ ಇಳಿಮುಖವಾಗುತ್ತಿದೆ! ಎನ್ನುವ ಒಂದು ಸುದ್ದಿ ಮತ್ತು ಡಿಸ್ಕವರಿ ಚಾನೆಲ್‌ನಲ್ಲಿ ಮೂಡಿಬರುವ ಜೀವವೈವಿಧ್ಯದ ಸಾಕ್ಷ್ಯಚಿತ್ರ ಸರಣಿಗಳು ನನ್ನ ಮನದಲ್ಲಿ ಗುಬ್ಬಿ ಗೂಡು ಕಟ್ಟುವಂತೆ ಮಾಡಿದವು... ಯಾವ್ಯಾವುದೋ ಕಾರಣಕ್ಕೆ ಅವುಗಳ ಗೂಡು ಮತ್ತು ಬದುಕನ್ನು ಕೊಡವಿ ಹಾಕಿರುವ ನಾವು ಮತ್ತೆ ಗೂಡು ಕಟ್ಟಿಕೊಡುವ ಬನ್ನಿ. ಆ ಮೂಲಕ ಗುಬ್ಬಚ್ಚಿ ಸಂತತಿ ಉಳಿಸೋಣ ಬನ್ನಿ...

ಇದು 2008ರ 'ಟೈಂ ಹೀರೋಸ್ ಆಫ್ ಎನ್ವಿರಾನ್ಮೆಂಟ್' ಗೌರವಕ್ಕೆ ಪಾತ್ರರಾದ ಮಹಾರಾಷ್ಟ್ರದ ನಾಸಿಕ್‌ನ 'ಗುಬ್ಬಿ ಚಾಂಪಿಯನ್' ಮೊಹಮ್ಮದ್ ದಿಲಾವರ್ ಮನೋಧರ್ಮ.

ಮನುಷ್ಯನ ಜತೆಗಿನ ಗುಬ್ಬಿಗಳದ್ದು ಸುಮಾರು 10 ಸಾವಿರ ವರ್ಷಗಳಷ್ಟು ಸುದೀರ್ಘಾವಧಿಯ ಸುಮಧುರ ನಂಟು! ಈಗ ಅವೆಲ್ಲಿ? ಆ ಸಂಬಂಧಗಳೇಕೆ ಇದ್ದಕ್ಕಿದ್ದಂತೆ ಮುರಿದು ಹೋಗಬೇಕು? ಎನ್ನುವ ಹತ್ತು ಹಲವು ನೋವುಗಳು ಇವರ ಎದೆಯ ತುಂಬ. ಹೀಗಾಗಿ ಗುಬ್ಬಿಗಳಿಗೆ ಇವರ ಮನೆ-ಮನದ ತುಂಬ ಗೂಡುಗಳು! ಅವುಗಳ ಚಿಂವ್ ಚಿಂವ್ ಕಲರವ ಮತ್ತೆ ಮತ್ತೆ ಮೊಳಗುತ್ತಲೇ ಇರಬೇಕು ಎನ್ನುವ ಕಾಳಜಿ ಹೊತ್ತು ಅವರು ರೂಪಿಸಿದ ನೇಚರ್ ಫಾರ್ ಎವರ್ ಎನ್ನುವ ಸಂಸ್ಥೆ ಗುಬ್ಬಿಗೊಂದು ದಿನ ಮೀಸಲಿಡುವಂತೆ ಮಾಡಿತು. ಅದೇ ಮಾರ್ಚ್ 20. ಎಲ್ಲೆಡೆ ಈ ದಿನ 'ಗುಬ್ಬಚ್ಚಿ ದಿನ'ವಾಗಿ ಆಚರಿಸಲ್ಪಡುತ್ತಿದೆ.

ಗುಬ್ಬಿ ದಿನದಂದು ಇವರ ಸಂಸ್ಥೆ ಸಾವಿರಾರು ಗುಬ್ಬಿ ಗೂಡುಗಳನ್ನು ಹಂಚುವ ಮೂಲಕ ಜನರಲ್ಲಿ ಜೀವವೈವಿಧ್ಯದ ಕಾಳಜಿಯನ್ನು ಬೆಳೆಸುವ ಅರ್ಥಪೂರ್ಣ ಯತ್ನ ಮಾಡುತ್ತದೆ. ನಾವೂ ಮನೆಯಂಗಳದಲ್ಲಿ ಚಿಂವ್‌ಗುಟ್ಟುವ ಗುಬ್ಬಿಗಳನ್ನು ಹೊಡೆದೋಡಿಸುವುದ ಬೇಡ. ಅವುಗಳ ಗೂಡುಗಳನ್ನು ಕೆಡುವೋದೂ ಬೇಡ. ಬದಲಾಗಿ ಅವಕ್ಕಾಗಿ ಒಂದಷ್ಟು ಜಾಗ ನಮ್ಮ ಮನೆ-ಮನದ ಮೂಲೆಯಲ್ಲಿ ಕೊಡೋಣ ಅಲ್ಲವೇ?

■ ದಿಲ್